# ಹೊಸ ವರುಷದ ಆಶಯ

■ ಮಹಾಂತೇಶ ಮಾಗನೂರ

ಬರಲಿ ಜೊತೆ ಜೊತೆಗೆ
ಕುಳಿತು ಕೇಳುವ ಪಾಠ
ಗೆಳೆಯರೊಂದಿಗೆ ಆಡಲು
ಮೈದಾನದಲ್ಲಿನ ಆಟ

ನೋಡೋಣ ಅಕ್ಕ ಪಕ್ಕ
ಕುಳಿತು ಸಿನಿಮಾ
ಸಾಕು ಈ ಸಾಮಾಜಿಕ
ಅಂತರದ ನಿಯಮ

ಭೇಟಿ ಆಗಲಿ ನಿರ್ಭಯವಾಗಿ
ಬಂಧು ಬಳಗ
ಕೊನೆಯಾಗಲಿ ವೈರಾಣು
ಜೊತೆಗಿನ ಕಾಳಗ

ಮುಚ್ಚಿಕೊಂಡು ಮುಖವ
ಓಡಾಡಿದ್ದು ಇನ್ನು ಸಾಕು
ಮೂಗು ಬಾಯಿ ಮುಚ್ಚಿಸಿದ
ಮಾಸ್ಕನು ಬಿಸಾಕು

ಸವೆದರೂ ಕಷ್ಟಗಳ
ಕಲಿತಿದ್ದೇವೆ ಹಲವು ಪಾಠ
ಸಂಕಷ್ಟಗಳ ಎದುರಿಸಿ
ಎದ್ದು ನಿಲ್ಲುವ ಪರಿಪಾಠ

ಬರಲಿ ಹೊಸ ವರುಷ
ತರಲಿ ಎಲ್ಲೆಡೆ ಹರುಷ ■



ಗಣೇಶ ಆರಳೀಕಟ್ಟೆ

# ಶಿಶು ಪ್ರಾಸಗಳು

■ ಹೊರೆಯಾಲ ದೊರೆಸ್ವಾಮಿ

## ಅಮ್ಮನ ಕೈ ತುತ್ತು

ಶಾಲೆಲಿರಬೇಕು ಪಾಠ
ಬಯಲಲ್ಲಿರಬೇಕು ಆಟ
ಹಸಿದಾಗ ಬೇಕು
ಅಮ್ಮನ ಕೈ ತುತ್ತಿನ ಊಟ!

## ಜೆಟ್ಟಿತಟ್ಟಿ

ಸುಮ್ನೆ ನಿಂತ್ರೆ ಜೆಟ್ಟಿ
ಸೋಲಿಸಬಹುದು
ಮೈಕೈಗೆ ನಾಲ್ಕು ತಟ್ಟಿ!

## ಮಂಡ್ಯದ ಕಬ್ಬು

ಮಂಡ್ಯದ ತುಂಬ ಕಬ್ಬು
ತಿನ್ನೋಕೆ ಹೋದ್ರೆ
ನನ್ನ ಹಲ್ಲುಬ್ಬು!






## ತಿಮ್ಮಗುಮ್ಮ

ಒಂದೂರಲ್ಲಿ ಒಬ್ಬ ತಿಮ್ಮ
ಅವನ ಹೊಟ್ಟೆ ಡುಮ್ಮ
ಒಬ್ಬನೆ ಹೋಗುವಾಗ
ಎದುರಾಯ್ತೊಂದು ಗುಮ್ಮ!

## ಅಜ್ಜ ಅಜ್ಜಿ ಕೋಲು

ಅಜ್ಜನ ಕೋಲು ಅಜ್ಜಿ
ಅಜ್ಜಿ ಕೋಲು ಅಜ್ಜ
ಅಜ್ಜ ಅಜ್ಜಿ ಸೇರ್ಕೊಂಡು
ತಿಂದ್ರು ನೂರೊಂದು ಬಜ್ಜಿ!

## ಬೆಂಗಳೂರು ರಸ್ತೆ

ಬೆಂಗ್ಳೂರು ರಸ್ತೆ ತುಂಬ
ಸ್ಕೈಕು
ಓಡ್ಸೋದು ಹೇಗಪ್ಪಾ
ಬೈಕು?

## ಧಾರವಾಡದ ಪೇಡ

ಧಾರವಾಡದಲ್ಲಿ
ಸಿಗೋದು ಪೇಡ
ಹಾಗಂತ ಯಾವಾಗ್ಲು
ಅದನ್ನೆ ತಿನ್ಬೇಡ!

## ಮೈಸೂರುಮೈಚೂರು

ಕಾಸಿದ್ರೆ ಮೈಸೂರು
ಇಲ್ದಿದ್ರೆ
ಮೈಚೂರು!



## ಕಂಪುಕುವೆಂಪು

ಮೈಸೂರು ಮಲ್ಲಿಗೆ ಕಂಪು
ತಿಂಗಳ ಬೆಳಕು ತಂಪು
ಸಂಗೀತ ಕೇಳೋಕೆ ಇಂಪು
ಕನ್ನಡಕ್ಕೊಬ್ರೆ ಕುವೆಂಪು!

## ಕೆನ್ನಡಕನ್ನಡ

ನೋಡೋಕ್ಕೆ ಹೋದ್ರೆ ಕೆನ್ನಡ
ಜೊತೆಗಿರ್ಲಿ ನಮ್ಮ ಕನ್ನಡ! ■

ಚಿತ್ರಗಳು: ಗಣೇಶ ಆರಳೀಕಟ್ಟೆ